5ಜಿ ಸಮರ

ಅಂತರ್ಜಾಲ ಕ್ಷೇತ್ರದಲ್ಲಿ ಸಂಚಲನವನ್ನೇ ಸೃಷ್ಟಿಸುವ ಸಾಧ್ಯತೆಯನ್ನು ಹೊಂದಿರುವ '5ಜಿ' ನೆಟ್‌ವರ್ಕ್ ಬಗ್ಗೆ ಭಾರತದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಗಳು ಶುರುವಾಗಿವೆ. ನಿರೀಕ್ಷೆಗಳು ಹೆಚ್ಚಾಗಿವೆ. ಈ ನಿರೀಕ್ಷೆಯನ್ನು ಯಶಸ್ವಿಗೊಳಿಸುವತ್ತ ಏರ್‌ಟೆಲ್ ದಾಪುಗಾಲಿಟ್ಟಿದೆ.

■ ಶಶಿಕುಮಾರ್ ಸಿ.

ಜಿಯೊ ಟೆಲಿಕಾಮ್ ಸಂಸ್ಥೆಯ ಡಾಟಾ ಸಮರದಿಂದ ತುಸು ಹೆಚ್ಚಾಗಿಯೇ ಹೊಡೆತ ತಿಂದಿದ್ದ ಏರ್‌ಟೆಲ್ ಟೆಲಿಕಾಮ್ ಸಂಸ್ಥೆಯು, ಜಿಯೊ ಸೇರಿದಂತೆ ಇತರ ಟೆಲಿಕಾಮ್ ಸಂಸ್ಥೆಗಳಿಗೆ ಎದುರೇಟು ನೀಡುವ ಸಲುವಾಗಿಯೇ ಎಲ್ಲರಿಗಿಂತ ಮುಂಚಿತವಾಗಿಯೇ ಭಾರತದಲ್ಲಿ '5ಜಿ' ನೆಟ್‌ವರ್ಕ್ ಅನ್ನು ಪರಿಚಯಿಸಲು ಸನ್ನದ್ಧವಾಗಿದೆ.

ಭಾರತದ ಟೆಲಿಕಾಮ್ ಸಂಸ್ಥೆಗಳು ಭಾರತಕ್ಕೆ '5ಜಿ' ನೆಟ್‌ವರ್ಕ್ ಪರಿಚಯಿಸುವ ನಿಟ್ಟಿನಲ್ಲಿ ಇನ್ನಿಲ್ಲದ ಪ್ರಯತ್ನಗಳನ್ನು ಈಗಾಗಲೇ ಆರಂಭಿಸಿವೆ. ಈ ಪೈಕಿ ಭಾರತಿ ಏರ್‌ಟೆಲ್ ಈಗಾಗಲೇ '5ಜಿ' ಸಮರಕ್ಕೆ ನಾಂದಿ ಹಾಡಿದೆ. ಈಚೆಗೆ ಹೈದರಾಬಾದ್ ನಗರದಲ್ಲಿ ಕಮರ್ಷಿಯಲ್ ನೆಟ್‌ವರ್ಕ್ ಮೂಲಕ '5ಜಿ' ಸೇವೆಯ ಲೈವ್ ಡೆಮೊವನ್ನು ಯಶಸ್ವಿಯಾಗಿ ಆಯೋಜನೆ ಮಾಡುವುದರ ಮೂಲಕ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಈ ಬಗ್ಗೆ ಸಂಸ್ಥೆಯು ಅಧಿಕೃತವಾಗಿ ಪ್ರಕಟಿಸಿದೆ.

'ಡೆಮೊ ಅಥವಾ 5ಜಿ ಪ್ರಾತ್ಯಕ್ಷಿಕೆಯನ್ನು ಎನ್‌ಎಸ್‌ಎ (ನಾನ್ ಸ್ಟ್ಯಾಂಡ್ ಅಲೋನ್) ನೆಟ್‌ವರ್ಕ್ ತಂತ್ರಜ್ಞಾನದ ಮೂಲಕ ಈಗಾಗಲೇ ಅಸ್ತಿತ್ವದಲ್ಲಿರುವ 1800 ಮೆಗಾ ಹರ್ಟ್ಸ್ ಬ್ಯಾಂಡ್‌ನ ಸ್ಪೆಕ್ಟ್ರಮ್‌ನಲ್ಲಿ ಪ್ರದರ್ಶಿಸಿದೆ. ಡೈನಾಮಿಕ್ ಸ್ಪೆಕ್ಟ್ರಮ್ ಷೇರಿಂಗ್ ಅನ್ನು ಬಳಸಿಕೊಂಡು, ಒಂದೇ ಸ್ಪೆಕ್ಟ್ರಮ್ ಬ್ಲಾಕ್‌ನಲ್ಲಿ ಒಂದೇ ಅವಧಿಯಲ್ಲಿ 5ಜಿ ಮತ್ತು 4ಜಿ ಅನ್ನು ಬಳಸಿಕೊಂಡು ಏರ್‌ಟೆಲ್ ಕಾರ್ಯನಿರ್ವಹಿಸಿದೆ. ಈ ಪ್ರಕ್ರಿಯೆಯು ಯಶಸ್ವಿಯಾಗಿರುವುದೇ ದೊಡ್ಡ ಮೈಲಿಗಲ್ಲು' ಎಂದು ಏರ್‌ಟೆಲ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಡೆಮೊ ಪ್ರದರ್ಶನದ ಮೂಲಕ ಎಲ್ಲಾ ಡೊಮೈನ್‌ಗಳು ಅಂದರೆ ರೇಡಿಯೊ, ಕೋರ್ ಮತ್ತು ಟ್ರಾನ್ಸ್‌ಪೋರ್ಟ್‌ಗಳಲ್ಲಿ ಏರ್‌ಟೆಲ್ 5ಜಿ ನೆಟ್‌ವರ್ಕ್ ಯಶಸ್ವಿಯಾಗಿ ಕಾರ್ಯನಿರ್ವಹಿಸಲಿದೆ ಎನ್ನಲಾಗಿದೆ. ಈ ಪ್ರಕ್ರಿಯೆ ಏರ್‌ಟೆಲ್ 5ಜಿಯ ಸಿದ್ಧತೆಯನ್ನು ದೃಢೀಕರಿಸಿದಂತಾಗಿದೆ. ದೇಶದಲ್ಲಿ ಸದ್ಯಕ್ಕೆ ಲಭ್ಯವಿರುವ ಇತರ ತಂತ್ರಜ್ಞಾನಗಳಿಗೆ ಹೋಲಿಸಿದರೆ ಏರ್‌ಟೆಲ್‌ನ 5ಜಿ ನೆಟ್‌ವರ್ಕ್ 10 ಪಟ್ಟು ವೇಗವನ್ನು ಒದಗಿಸುವ ಅಪಾರ ಸಾಮರ್ಥ್ಯವನ್ನು ಹೊಂದಿದೆ. ಡೆಮೊ ಅವಧಿಯಲ್ಲಿ ಬಳಕೆದಾರರು ತಮ್ಮ 5ಜಿ ಸ್ಮಾರ್ಟ್‌ಫೋನ್ ಅನ್ನು ಬಳಸಿಕೊಂಡು ಒಂದು ಪೂರ್ಣ ಪ್ರಮಾಣದ ಸಿನಿಮಾವೊಂದನ್ನು ಕೆಲವೇ ಸೆಕೆಂಡ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಂಡಿರುವುದು ಸಾಬೀತಾಗಿದೆ. ಇದು 5ಜಿ ವೇಗ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

'ಡೆಮೊ ಮೂಲಕ ತಮ್ಮ ಸಾಮರ್ಥ್ಯವನ್ನು ಪ್ರದರ್ಶನಕ್ಕೆ ದಣಿವರಿಯದೆ ಶ್ರಮಪಟ್ಟ ಸಂಸ್ಥೆಯ ಎಂಜಿನಿಯರ್‌ಗಳ ಬಗ್ಗೆ ನಾನು ಹೆಮ್ಮೆಪಡುವೆ. ಈ ಪ್ರದರ್ಶನವು ನಮಗೆ ಗೇಮ್ ಚೇಂಜಿಂಗ್ ಕ್ಷಣವಾಗಿತ್ತು. ಈ ಪರೀಕ್ಷೆಯಲ್ಲಿ ನಾವು ಪಾಸ್ ಆಗಿದ್ದೇವೆ. 5ಜಿ ನೆಟ್‌ವರ್ಕ್ ಅನ್ನು ಡೆಮೊಮೂಲಕ ತೋರಿಸಿದ ಮೊದಲ ಆಪರೇಟರ್ಸ್ ನಾವಾಗಿದ್ದೇವೆ. ಈ ಮೂಲಕ ನಾವು ನಮ್ಮನ್ನು ಮತ್ತೊಮ್ಮೆ ನಿರೂಪಿಸಿಕೊಂಡಿದ್ದೇವೆ. ಎಲ್ಲೆಡೆಯೂ ಭಾರತೀಯರನ್ನು ಸಬಲರನ್ನಾಗಿಸುವ ನಿಟ್ಟಿನಲ್ಲಿ ಹೊಸ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸುವವರಲ್ಲಿ ನಾವೇ ಮೊದಲಿಗರಾಗಿದ್ದೇವೆ ಎನ್ನುವುದನ್ನು ಮತ್ತೊಮ್ಮೆ ನಿರೂಪಿಸಿ ತೋರಿಸಿದ್ದೇವೆ' ಎಂದು ಪ್ರಕಟಣೆಯಲ್ಲಿ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೋಪಾಲ್ ವಿಠ್ಠಲ್ ತಿಳಿಸಿದ್ದಾರೆ.

■